ವಿಪರೀತವಾಗಿತ್ತು. ಅದರ ಬಿಸಿ ದೆಹಲಿಯವರೆಗೂ ತಟ್ಟುತ್ತಿತ್ತು. ಅಂತಹ ದಿನಗಳಲ್ಲಿ ಒಮ್ಮೆ ಸ್ವಾಮೀಜಿಯವರು ಒಂದು ಉಪನ್ಯಾಸ ನೀಡುವುದಕ್ಕಾಗಿ ದೆಹಲಿಗೆ ಹೋದರು. ಉಪನ್ಯಾಸದ ನಂತರ ಅಲ್ಲಿನ ಜನರು ಅವರನ್ನು ಕೇಳಿದರು, "ಮಹಾರಾಜ್ ನಾವು ಬದುಕುವುದಾದರೂ ಹೇಗೆ? ನಮ್ಮ ದೇಶ ಎತ್ತ ಸಾಗುತ್ತಿದೆ?" ಬಹುಶಃ ಅವರು ಸ್ವಾಮೀಜಿಯವರಿಂದ ಒಂದು ದೊಡ್ಡ ಧರ್ಮೋಪದೇಶವನ್ನೇ ಬಯಸುತ್ತಿದ್ದರು. ರಂಗನಾಥಾನಂದಜಿ ಉತ್ತರಿಸಿದರು, "ಸ್ವಾಮಿ ವಿವೇಕಾನಂದರು ಲಂಡನ್‌ನಲ್ಲಿದ್ದಾಗ ಓರ್ವ ಮಹಿಳೆ ಅವರನ್ನು ಕುರಿತು ಹೇಳಿದಳು: 'ಭಾರತವು ನೈತಿಕ ಮೌಲ್ಯ ಗಳಿರುವ ದೇಶ. ಇದು ಸಂತೋಷದ ವಿಷಯ.' ತಕ್ಷಣ ಸ್ವಾಮಿ ವಿವೇಕಾನಂದರು, 'ಹಾಗಿಲ್ಲದಿದ್ದರೇ ಚೆನ್ನಾಗಿರುತ್ತಿತ್ತು' ಎಂದು ಉತ್ತರಿಸಿದರು. ಆ ಮಹಿಳೆಗೆ ಅತ್ಯಾಶ್ಚರ್ಯವಾಯಿತು. 'ನಿಜವಾಗಿ ಈಗ ಆಗುತ್ತಿರುವುದೇನು? ಜನರಿಗೆ ಈಗ ಬಲ ಬರುತ್ತಿದೆ. ಅದರಿಂದಲೇ ಈಗ ಈ ಹಿಂಸಾಕಾರ್ಯಗಳು ನಡೆಯುತ್ತಿವೆ ಅಷ್ಟೇ. ಅದಕ್ಕೆ ಯೋಚಿಸಬೇಡಿ.' ಹೀಗೆ ಎಂತಹ ಕ್ಷೋಭೆಯ ಸಮಯ ದಲ್ಲಿಯೂ ಅವರು ಬೆಳಕನ್ನು ಕಾಣುವ ಆಶಾವಾದಿ ಗಳಾಗಿದ್ದರು. (ಪು.೧೫೩)

ಸ್ವಾಮಿಗಳು ಉನ್ನತ ವಿಚಾರಗಳ ಕುರಿತಾಗಿ ಉಪನ್ಯಾಸ ನೀಡುವಾಗ ಎಷ್ಟು ಗಂಭೀರರಾಗಿರುತ್ತಿದ್ದರೋ, ಮಧ್ಯೆ ಮಧ್ಯೆ ಹಾಸ್ಯಗಳಿಂದ ತಮ್ಮ ಸುತ್ತಲಿದ್ದವರ ಮನಸ್ಸಿಗೆ ಮುದ ನೀಡುತ್ತಿದ್ದರು. ಅವರೊಮ್ಮೆ ದೆಹಲಿ ಕೇಂದ್ರದ ಮುಖ್ಯಸ್ಥರಾಗಿದ್ದಾಗ ಉತ್ಸವವೊಂದರ ಸಂದರ್ಭದಲ್ಲಿ ಶ್ರೀರಾಮಕೃಷ್ಣರನ್ನು ಕುರಿತು ಮಾತನಾಡಲು ಪಂಡಿತ ರೊಬ್ಬರನ್ನು ಕರೆಸಿದ್ದರು. ಅವರಿಗೆ ನೀಡಿದ್ದ ಸಮಯ ೪೫ ನಿಮಿಷಗಳು. ಆ ಪಂಡಿತರು ರಾಮ, ಕೃಷ್ಣ ಪದಗಳ ವ್ಯುತ್ಪತ್ತಿಯ ಬಗ್ಗೆ, ಅವೆರಡೂ ಕೂಡಿ ರಾಮಕೃಷ್ಣ ಆದ ಬಗ್ಗೆ, ಈ ಸಮಾಸದ ಬಗ್ಗೆ ಪಾಣಿನಿ, ಭರ್ತೃಹರಿ, ಪತಂಜಲಿ ಮೊದಲಾದ ವ್ಯಾಕರಣಕಾರರು ಏನೇನು ಹೇಳಿದ್ದಾರೆ ಎಂಬುದನ್ನೆಲ್ಲಾ ವಿಸ್ತಾರವಾಗಿ ಹೇಳುತ್ತ ಹೋದರು. ಅದು ಹಾಗೆಯೇ ಮುಂದುವರೆಯುತ್ತ ಹೋಯಿತು. ನಂತರ ಮಹಾರಾಜ್ 'ಈ ಪಂಡಿತರು ತಮ್ಮ ೪೫ ನಿಮಿಷಗಳ ಅವಧಿಯನ್ನು ಮುಗಿಸಿದ ಮೇಲೂ ರಾಮಕೃಷ್ಣರೇ ಇನ್ನೂ ಹುಟ್ಟಿರಲಿಲ್ಲ' ಎಂದು ಹಾಸ್ಯವಾಗಿ ನುಡಿದರು. (ಪು.೧೪೧)

ಒಮ್ಮೆ ಅವರು ಕಿರಿಯ ಸಂನ್ಯಾಸಿ ಹಾಗೂ ಕೆಲವು ಭಕ್ತರೊಂದಿಗೆ ಚಟುವಟಿಕೆಯೇ ಇಲ್ಲದ ಒಂದು ಸಣ್ಣ ಹಳ್ಳಿಗೆ ಹೋಗಿದ್ದರು. ಆಗ ಸಂಜೆಯಾಗಿತ್ತು. ಸಂಪರ್ಕದ ಅಭಾವದಿಂದಾಗಿ ಸಂಘಟಕರು ಅವರನ್ನು ಎದುರುಗೊಳ್ಳಲು ಬರಲಾಗಲಿಲ್ಲ. ಆಗ ಅವರೆಲ್ಲ ಅತ್ಯಂತ ಆಯಾಸಗೊಂಡಿದ್ದರು. ಜೊತೆಗೆ ಹಸಿವೂ ಅವರನ್ನು ಕಾಡುತ್ತಿತ್ತು. ಇವರಲ್ಲಿಗೆ ಹೋದಾಗ ಒಂದೆರಡು ಬೀದಿನಾಯಿ ಗಳನ್ನು ಬಿಟ್ಟರೆ ಮತ್ತೊಂದು ಜೀವದ ಸುಳಿವು ಹತ್ತಿರದಲ್ಲೆಲ್ಲೂ ಇರಲಿಲ್ಲ. ಪಕ್ಕದಲ್ಲಿಯೇ ಸೊಳ್ಳೆಗಳಿಂದ ತುಂಬಿದ್ದ ಕೊಳವೊಂದಿತ್ತು. ಎಲ್ಲರಿಗೂ ಸಹಜವಾಗಿಯೇ ಕಿರಿಕಿರಿಯಾಗಿ ಚಡಪಡಿಸುತ್ತಿದ್ದರು. ಆದರೆ ಸ್ವಾಮೀಜಿಯವರು ಮಾತ್ರ ಕಲ್ಲಿನ ಬಂಡೆ ಯಂತೆ ಶಾಂತವಾಗಿದ್ದರು. ಆಕಾಶದ ಕಡೆ ನೋಡುತ್ತ 'ಆಕಾಶ ಎಷ್ಟು ನಿರ್ಮಲವಾಗಿದೆ. ಉಜ್ವಲವಾಗಿ ಬೆಳಗುತ್ತಿರುವ ಆ ನಕ್ಷತ್ರಗಳು ಮತ್ತು ಹೊಳೆಯುತ್ತಿರುವ ಚಂದ್ರನನ್ನು ನೋಡಿ. ನಗರದಲ್ಲಿ ಇಂತಹ ದೃಶ್ಯ ನಮಗೆ ಕಾಣಲು ಸಿಗುತ್ತದೆಯೆ?' ಎಂದರು. ಅವರಿಂದ ಒಂದು ನಿಂದೆಯ ನುಡಿಯಾಗಲೀ, ವ್ಯಂಗ್ಯದ ಮಾತಾಗಲೀ ಬರಲಿಲ್ಲ. ಬದಲಿಗೆ ಅವರು ಆ ಆನಂದವನ್ನು ನಿಜವಾಗಿ ಅನುಭವಿಸುತ್ತಿದ್ದರು. ಅವರೊಬ್ಬ ಸ್ಥಿತಪ್ರಜ್ಞರಾಗಿದ್ದರು. ಅಂದು ರಾತ್ರಿ ಅವರ ಜೊತೆಯಲ್ಲಿದ್ದವರೆಲ್ಲ ಅವರಿಂದ ಒಂದು ಪಾಠವನ್ನು ಕಲಿತರು. (ಪು.೩೨೦)

ಸ್ವಾಮಿಗಳು ಆಸ್ಟ್ರೇಲಿಯಾದಲ್ಲಿ ರೇಡಿಯೋಗೆ ನೀಡಿದ ಸಂದರ್ಶನದಲ್ಲಿ ಆತ್ಮಸಂಯಮವನ್ನು ಜನರು ಆಧ್ಯಾತ್ಮಿಕ ದೃಷ್ಟಿಯಿಂದ ಮಾತ್ರವಲ್ಲ, ದೈನಂದಿನ ಜೀವನದಲ್ಲಿಯೂ ಒಂದು ಜೀವನದ ಶಿಸ್ತನ್ನಾಗಿ ಪಾಲಿಸುವುದು ಅಗತ್ಯವೆಂಬ ಮಾತನ್ನು ಒತ್ತಿ ಹೇಳುತ್ತಿದ್ದರು. ಸಂದರ್ಶಕರು ಅವರನ್ನು ಕುರಿತು, 'ಸ್ವಾಮೀಜಿ, ನಾವು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತೇವೆ, ನೀವು ಆತ್ಮಸಂಯಮ ಎನ್ನುತ್ತೀರಿ. ಇವೆರಡೂ ಪರಸ್ಪರ ವಿರುದ್ಧವಾದವುಗಳಲ್ಲವೇ?' ಎಂದು ಕೇಳಿದರು. ಅದಕ್ಕೆ ಸ್ವಾಮೀಜಿ ನಗುತ್ತ ಉತ್ತರಿಸಿದರು: 'ನಾನೂ ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ನಂಬಿಕೆಯಿರಿಸಿರುವವನೇ. ರವಿಶಂಕರ್ ಅವರ ಸಿತಾರ್ ವಾದನವನ್ನು ಕೇಳಿ, ಅವರ ರಾಗಗಳ ಅಭಿವ್ಯಕ್ತಿ ಎಷ್ಟು ಸ್ವತಂತ್ರವಾಗಿ ಹರಿಯುತ್ತಿರುತ್ತದೆ. ಆದರೆ, ಅದರ ಹಿಂದೆ ಇರುವ ಹಲವಾರು ವರ್ಷಗಳ ಅವರ ಆತ್ಮಸಂಯಮ ಎಂತಹದು ಎಂಬುದನ್ನು ಬಲ್ಲಿರಾ? ನಿಮಗೆ ಇದು ಅರ್ಥವಾಗದಿದ್ದರೆ ನಾನೇ ನಿಮಗೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನಿಮ್ಮ ಮಕ್ಕಳಿಗೆ ಅವರ ಜಲಬಾಧೆಯನ್ನು ನಿವಾರಿಸಿಕೊಳ್ಳಲು ಅಗತ್ಯವಾದ ಶಿಸ್ತನ್ನು ಏಕೆ ಕಲಿಸುತ್ತೀರಿ? ಅದರ ಬದಲು, ತಮ್ಮ ಮನಬಂದ ಕಡೆ ಮೂತ್ರವಿಸರ್ಜನೆ ಮಾಡಲು ಅವರನ್ನು ಬಿಡುವುದಿಲ್ಲವೇಕೆ?' ಸಂದರ್ಶಕರು ನಿರುತ್ತರರಾದರು (ಪು.೩೫೭).

ಹೀಗೆ ಪ್ರಕೃತ ಗ್ರಂಥವು ಸ್ವಾಮಿ ರಂಗನಾಥಾನಂದಜಿಯವರ ವ್ಯಕ್ತಿತ್ವದ ವೈವಿಧ್ಯಮಯ ಆಯಾಮಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ. ಉತ್ತಮ ಗುಣಮಟ್ಟದ ಹಾಳೆಗಳಿಂದ, ಕೊನೆ ಯಲ್ಲಿ ಅನೇಕ ಛಾಯಾಚಿತ್ರಗಳನ್ನೊಳಗೊಂಡ, ಗಟ್ಟಿಕವಚ ದಿಂದ ಸುಂದರವಾಗಿ ಹೊರಹೊಮ್ಮಿರುವ ಪ್ರಾಧಿಕಾರದ ಈ ಘನಕೆಲಸವು ಶ್ಲಾಘ್ಯವೇ ಸರಿ. ಅದಕ್ಕಿಟ್ಟಿರುವ ರೂ.೨೫೦ ಬೆಲೆ ಎಲ್ಲರಿಗೂ ಕೈಗೆಟಕುವಂತದ್ದೆ. ಆದರೂ, ಕೈಗೊಂಡ ಕಾರ್ಯವನ್ನು ಅಲ್ಪಸಮಯದಲ್ಲಿಯೇ ನಿರ್ವಹಿಸುವ ಒತ್ತಡ ದಿಂದ ಅನಿವಾರ್ಯವಾಗಿ ಆದ ಅನೇಕ ಮುದ್ರಣ ದೋಷ ಗಳು ನಮ್ಮ ಕಣ್ಣು ತಪ್ಪಿಸಿಕೊಳ್ಳುವುದಿಲ್ಲ. ಪ್ರಾಧಿಕಾರವು ಇಂತಹ ಕೃತಿಗಳನ್ನು ಮುಂದೆ ಇನ್ನೂ ಹೆಚ್ಚು ಹೆಚ್ಚು ಹೊರ ತಂದು ಕನ್ನಡ ಸಾರಸ್ವತಲೋಕದ ಸಿರಿಯನ್ನು ವೃದ್ಧಿಗೊಳಿಸಲಿ.

*–ಸ್ವಾಮಿ ಕರುಣಾಕರಾನಂದ*

# ಶಿವಕ್ಷೇತ್ರ ನಾಗೇಶ್ವರ

**ಕಥೆ:** ಟಿ. ವಿಶ್ವನಾಥನ್

**ಕಲೆ:** ಶಂಕರ್

**1** ಶಿವನು ತಾನಾಗಿಯೇ ಆವಿರ್ಭಾವ ಹೊಂದಿದ ಹನ್ನೆರಡು ಪುಣ್ಯಕ್ಷೇತ್ರಗಳು ಅತ್ಯಂತ ಪ್ರಸಿದ್ಧವಾಗಿವೆ. ಈ ಕ್ಷೇತ್ರಗಳನ್ನು 'ಜ್ಯೋತಿರ್ಲಿಂಗ'ಗಳೆಂದು ಕರೆಯುತ್ತಾರೆ. ಈ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ನಾಗೇಶ್ವರ ಲಿಂಗವನ್ನು ಕುರಿತಾಗಿದೆ ಈ ಕಥೆ.


**2** ದಾರುಕನೆಂಬ ಒಬ್ಬ ರಾಕ್ಷಸನಿದ್ದ. ಅವನ ಹೆಂಡತಿ ದಾರುಕಿ. ಅವರಿಬ್ಬರೂ ದುರ್ಗೆಯನ್ನು ಒಲಿಸಲು ಕಠಿಣ ತಪಸ್ಸನ್ನು ಆಚರಿಸಿದರು. ಕೊನೆಗೆ ದುರ್ಗಾಮಾತೆ ಅವರಿಗೆ ಪ್ರತ್ಯಕ್ಷಳಾದಳು.





**3** ದುರ್ಗೆಯ ವರದಿಂದ ರಾಕ್ಷಸರಿಗೆ ಸಮುದ್ರದ ಪಶ್ಚಿಮ ತೀರದಲ್ಲಿ ೬೪ ಮೈಲಿ ವಿಸ್ತೀರ್ಣವುಳ್ಳ ಒಂದು ವೈಭವದ ನಗರ ಲಭಿಸಿತು. ಅದರ ಸುತ್ತ ಸುಂದರವಾದ ಉದ್ಯಾನವಿತ್ತು.



**4** ದಾರುಕ, ದಾರುಕಿಯರು ಕ್ರಮೇಣ ಉದ್ಧಟರಾದರು. ಅವರ ಉದ್ಯಾನದ ಬಳಿ ವಾಸಿಸುತ್ತಿದ್ದ ಜನರನ್ನು ಅವರು ನಾನಾ ಬಗೆಯಲ್ಲಿ ಹಿಂಸಿಸತೊಡಗಿದರು.




**5** ಒಂದು ಸಲ ಔರ್ವನೆಂಬ ಮಹರ್ಷಿ ಸಮುದ್ರದ ಪಶ್ಚಿಮ ತೀರಕ್ಕೆ ಬಂದ. ಆಗ ಅಲ್ಲಿನ ಜನರೆಲ್ಲ ಅವರ ಬಳಿಗೆ ಹೋಗಿ, ರಕ್ಕಸ–ರಕ್ಕಸಿಯರು ತಮಗೆ ನೀಡುತ್ತಿದ್ದ ಉಪಟಳವನ್ನು ಕುರಿತು ತಮ್ಮ ಸಂಕಟವನ್ನು ಹೇಳಿಕೊಂಡರು.





**6** ಋಷಿಗಳ ಮಾತನ್ನು ಕೇಳಿ ಸಮಾಧಾನಗೊಂಡ ಜನರು ರಕ್ಕಸ–ರಕ್ಕಸಿಯರೊಂದಿಗೆ ಯುದ್ಧ ಮಾಡಲು ಶಸ್ತ್ರಾಸ್ತ್ರಗಳನ್ನು ಹಿಡಿದುಕೊಂಡು ಸಿದ್ಧರಾದರು.



**7** ಔರ್ವ ಋಷಿ ಶಾಪ ನೀಡಿದ ವಿಚಾರ ದಾರುಕ–ದಾರುಕಿಯರಿಗೆ ತಿಳಿಯಿತು. ಅವರು ಭಯದಿಂದ ತಲ್ಲಣಗೊಂಡರು. ದಾರುಕಿಯು ಸಮುದ್ರತೀರದಲ್ಲಿದ್ದ ಆ ನಗರವನ್ನೇ ಕಿತ್ತು, ಸಮುದ್ರದ ಮಧ್ಯೆ ಸ್ಥಾಪಿಸಿದಳು. ಅಲ್ಲಿಂದಲೇ ಅವರು ಜನರಿಗೆ ಇನ್ನಷ್ಟು ಉಪಟಳ ನೀಡತೊಡಗಿದರು.




**8** ಒಂದು ಪವಿತ್ರ ದಿನದಂದು ಶಿವನ ಭಕ್ತರೆಲ್ಲ ಸಮುದ್ರತೀರದಲ್ಲಿ ಸ್ನಾನ ಮಾಡಿ ಶಿವನ ಪೂಜೆ ಮಾಡಲು ನೆರೆದರು. ಅವರು ಸ್ನಾನ ಮಾಡುತ್ತಿದ್ದಾಗ...




**9** ದಾರುಕ–ದಾರುಕಿಯರು ಸ್ನಾನ ಮಾಡುತ್ತಿದ್ದವರನ್ನೆಲ್ಲ ಸೆರೆ ಹಿಡಿದು, ಅವರಿದ್ದ ದ್ವೀಪದಲ್ಲಿ ಬಂಧನದಲ್ಲಿಟ್ಟರು.


ಅಲ್ಲಿ ಬಂಧಿತರಾದವರಲ್ಲಿ ಯಾತ್ರಿಕರ ನಡುವೆ ಸುಪ್ರಿಯನೆಂಬವನು ಒಬ್ಬನಿದ್ದ. ಅವನು ತನ್ನ ಜೊತೆಗಾರರಿಗೆ ಹೇಳಿದ....




**10** ಸುಪ್ರಿಯನು ಮಣ್ಣಿನಿಂದ ಶಿವಲಿಂಗವೊಂದನ್ನು ನಿರ್ಮಿಸಿ, ಇತರರೊಂದಿಗೆ ಪೂಜೆ ಮಾಡಲಾರಂಭಿಸಿದ. ಒಂದು ದಿನ ದಾರುಕ–ದಾರುಕಿಯರು ಅದನ್ನು ಗಮನಿಸಿದರು.




**11** ದಾರುಕನನ್ನು ಸಾವಿನ ಭಯ ಕಾಡತೊಡಗಿತು. ಆದರೆ ಅವನು ಅದನ್ನು ಪ್ರಕಟಗೊಳಿಸಲಿಲ್ಲ. ಅವನು ಸುಪ್ರಿಯನನ್ನು ಪೂಜೆಯಿಂದ ವಿಮುಖಗೊಳಿಸಲು ಯತ್ನಿಸಿದ. ಆದರೆ ವಿಚಲಿತನಾಗದ ಸುಪ್ರಿಯನು ಮಾನಸಿಕವಾಗಿ ತನ್ನ ಪೂಜೆಯನ್ನು ಮುಂದುವರೆಸಿದ.




**12** ಸುಪ್ರಿಯನ ಪ್ರಾರ್ಥನೆಗೆ ಉತ್ತರವಾಗಿ ಶಿವನು ಪ್ರತ್ಯಕ್ಷನಾದ. ಅವನು ದಾರುಕ–ದಾರುಕಿಯರನ್ನು ತನ್ನ ತ್ರಿಶೂಲದಿಂದ ಕೊಂದು ಸುಪ್ರಿಯನೇ ಮೊದಲಾದ ಭಕ್ತರನ್ನು ಕಾಪಾಡಿದ.

